(SRI V. S. PATIL)
this Additional District Magistrate interfere in this case?

Sri VEERENDRA PATIL.—Additional District Magistrate has got the power to withdraw cases, Sir.

ಶ್ರೀ ಜಿ. ವೆಂಕಟೇಗೌಡ.—ಅಡಿಷನಲ್ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರೇ ಕೇಸು ಪಾಪಸು ತೆಗೆದುಕೊಳ್ಳಿ ಎಂದು ಹೇಳಿದರೇ ಸ್ವಾಮಿ?

ಶ್ರೀ ವೀರೇಂದ್ರ ಪಾಟೀಲ್.—ಆ ಸಮಾಚಾರ ಇಲ್ಲ.

ಶ್ರೀ ಕೆ. ಕೆಂಚಪ್ಪ.—ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಪ್ರಾಸಿಕ್ಯೂಟ್ ಮಾಡಬೇಕು ಎಂದು ಆರ್ಡರ್ ಕೊಡುವಾಗ ಕ್ರಿಮಿನಲ್ ಇಂಟೆಂಟ್ ಇರಲಿಲ್ಲ ಎಂದು ಗೊತ್ತಿಲ್ಲದೇ ಕೊಟ್ಟಿದ್ದಾರೆಯೇ?

ಶ್ರೀ ವೀರೇಂದ್ರ ಪಾಟೀಲ್.—ಇಲ್ಲಿ ಎರಡು ಕೇಸು ಇವೆ. ಅದು ಕಂಫ್ಯೂಸ್ ಆಗುತ್ತ ಇದೆ. ಒಂದನೆಯದರಲ್ಲಿ ಆರಮ್ಸ್ ಆಕ್ಟ್ ಪ್ರಕಾರ ಅವರ ಪರ್ಮಿಷ್ಷ ಅವಶ್ಯಕವಾಗಿ ಬೇಕಾಗುತ್ತದೆ. ಎರಡನೆಯ ಕೇಸ್‌ನಲ್ಲಿ ಇಲ್ಲ.

ಶ್ರೀ ಕೆ. ಕೆಂಚಪ್ಪ.—409ನೆಯ ಸೆಕ್ಷನ್ ಪ್ರಕಾರ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಪ್ರಾಸಿಕ್ಯೂಷನ್ ಮಾಡುವುದಕ್ಕೆ ಅನುಮತಿ ಕೊಡುವಾಗ ಕ್ರಿಮಿನಲ್ ಮಿಸ್ ಅಪ್ರೋಪ್ರಿಯೇಷನ್ ಆಗಿದೆ ಎನ್ನುವುದರಲ್ಲಿ ಅವನ ಉದ್ದೇಶ ಏನಿತ್ತು ಎಂಬುದು ಗೊತ್ತಾಗದೇ ಪ್ರಾಸಿಕ್ಯೂಷನ್ ಆರ್ಡರ್ ಕೊಟ್ಟಿದ್ದರೇ ಎಂದು?

ಶ್ರೀ ವೀರೇಂದ್ರ ಪಾಟೀಲ್.—ಮೊದಲನೆ ಕೇಸ್‌ನಲ್ಲಿ ಆರಮ್ಸ್ ಆಕ್ಟ್ ಪ್ರಕಾರ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರ ಪರ್ಮಿಷ್ಷ ಬೇಕಾಗುತ್ತದೆ. ಎರಡನೆಯ ಕೇಸ್‌ನಲ್ಲಿ ಅಮಲ್ದಾರರ ಆರ್ಡರ್ ಪ್ರಕಾರ ಕೇಸು ರಿಜಿಸ್ಟರ್ ಮಾಡಲಾಯಿತು. ಅನಂತರ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ತನಿಖೆ ಮಾಡಿ, ಅವನದು dishonest intention ಇರಲಿಲ್ಲ ಎಂದು ತೀರ್ಪು ಕೊಟ್ಟರು. ಆ ಮೇಲೆ ಕೇಸು ಪಾಪಸು ತೆಗೆದುಕೊಂಡಿದ್ದಾರೆ.

ಶ್ರೀ ಕೆ. ಕೆಂಚಪ್ಪ.—ಸಬ್ ಡಿವಿಜ಼ನ್ ಆಫೀಸರು ಅನುಮತಿ ಕೊಡದೆ ಪ್ರಾಸಿಕ್ಯೂಟ್ ಮಾಡುವುದಕ್ಕಾಗುವುದಿಲ್ಲವೆಂದು ಗೊತ್ತಿದೆಯೇ?

ಶ್ರೀ ವೀರೇಂದ್ರ ಪಾಟೀಲ್.—ನನ್ನ ಹತ್ತಿರ ಇರುವ ಸಮಾಚಾರದ ಪ್ರಕಾರ ಅಮಲ್ದಾರರ ಆಜ್ಞೆಪ್ರಕಾರ ಕೇಸು ರಿಜಿಸ್ಟರ್ ಆಗಿದೆ ಎಂದಿದೆ.

ಶ್ರೀ ಕೆ. ಕೆಂಚಪ್ಪ.—ಸಬ್ ಡಿವಿಜ಼ನ್ ಆಫೀಸರು ಮ್ಯಾಜಿಸ್ಟ್ರೇಟರಾಗಿದ್ದೂ ಪ್ರಾಸಿಕ್ಯೂಷನ್ ಮಾಡುವುದಕ್ಕೆ ಅಧಿಕಾರವನ್ನೂ ಕೊಡದೆ ಪ್ರಾಸಿಕ್ಯೂಟ್ ಮಾಡುವುದಕ್ಕೆ ಸಾಧ್ಯವಿಲ್ಲದೆ ಇರುವಾಗ criminal intention ಇಲ್ಲವೆಂದು ಬಿಡುವುದಕ್ಕೆ ಹೇಗಾಗುತ್ತದೆ?

ಶ್ರೀ ವೀರೇಂದ್ರ ಪಾಟೀಲ್.—ನಾನು ಹೇಳಿದ ಪ್ರಕಾರ ಅಮಲ್ದಾರರ ಆರ್ಡರ್ ಪ್ರಕಾರ ಕೇಸನ್ನು ರಿಜಿಸ್ಟರ್ ಮಾಡಲಾಯಿತು. ಕೇಸು ರಿಜಿಸ್ಟರ್ ಆದ ಮೇಲೆ ಅಡಿಷನಲ್ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಇದರಲ್ಲಿ dishonest intention ಇಲ್ಲವೆಂದು ತೀರ್ಪುಕೊಟ್ಟು ಕೇಸನ್ನು ಪಾಪಸು ತೆಗೆದುಕೊಂಡಿದ್ದಾರೆ.

Amount allotted under Second Five-Year Plan in Channapatna Taluk.

Q.—574. Sri B. K. PUTTARAMIYA (Channapatna).—

Will the Government be pleased to state :—

(*a*) the amounts that have been provided under the Second Five-Year Plan under various heads to the Channapatna Taluk ;

(*b*) the action they have taken for the implementation of the schemes proposed in the Second Five-Year Plan for the said taluk ?

A.—Sri S. NIJALINGAPPA (Chief Minister).—

(*a*) The District and Taluk Plans have not been prepared yet.

(*b*) Does not arise in view of the answer to (*a*) above.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—(ಎ) ಭಾಗಕ್ಕೆ ಉತ್ತರವಾಗಿ 'District and Taluk Plans have not been prepared yet' ಎಂದು ಹೇಳಿದ್ದಾರೆ. ಈ ಯೋಜನೆಗಳನ್ನು ತಯಾರು ಮಾಡುವವರು ಯಾರು?

ಶ್ರೀ ಆರ್. ಎಂ. ದೊಡ್ಡಮನೆ ಹೆಗ್ಗಡೆ.—ಸಂಬಂಧಪಟ್ಟ ಅಧಿಕಾರಿಗಳು.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಅವರು ತಯಾರು ಮಾಡದೆ ಇದ್ದರೆ, partiality ಮಾಡಿದರೆ, ಅದಕ್ಕೆ ಮುಂದಿನ ಕಾರ್ಯ ಏನು ಮಾಡಬೇಕು?

ಶ್ರೀ ಆರ್. ಎಂ. ದೊಡ್ಡಮನೆ ಹೆಗ್ಗಡೆ.—ಸಾರ್ವಜನಿಕರ ಅಭಿಪ್ರಾಯವನ್ನೂ ಕೂಡ, ಈ ಯೋಜನೆಗಳನ್ನು ತಯಾರು ಮಾಡುವಾಗ ಪಡೆಯಬೇಕೆಂದು ಗಮನಕ್ಕೆ ತೆಗೆದುಕೊಳ್ಳಲಾಗುತ್ತದೆ.

Persons that took part and were convicted in the Satyagraha at Belgaum.

Q.—607 Sri V. S. PATIL (Belgaum I).—

Will the Government be pleased to state :—

(*a*) the number of persons, that took part in Satyagraha sponsored by the Maharashtra Ekikarana Samiti at Belgaum since 9th March 1956 ;

(*b*) the number of them that were sentenced to pay fine or to undergo imprisonment ;